ದಿಃ 02.01.2020 Ex.No.34/2017 PW-1

ದಿಃ 02.01.2020 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಂ.ಕೆ.ಎನ್. ವಕೀಲರಿಂದ

ನನ್ನ ತಾತನ ಹೆಸರು ಸುಬ್ಬೇಗೌಡ. ಅವರಿಗೆ ಮೂರು ಜನ ಮಕ್ಕಳು, ಅವರ ಹೆಸರು ಶ್ರೀಕಂಠೇಗೌಡ, ಪುಟ್ಟಸ್ವಾಮಿಗೌಡ ಮತ್ತು ತಮ್ಮಯ್ಯ ಆಗಿರುತ್ತಾರೆ. ನನ್ನ ತಂದೆಯ ಹೆಸರು ಶ್ರೀಕಂಠೇಗೌಡ ಆಗಿರುತ್ತಾರೆ, ಅವರು ಹಿರಿಯ ಮಗ ಆಗಿರುತ್ತಾರೆ. ಈ ಅರ್ಜಿಯಲ್ಲಿರುವ ಸ್ವತ್ತಿನ ಖಾತೆ ಪುಟ್ಟಸ್ವಾಮಿಗೌಡ ಮತ್ತು ತಮ್ಮಯ್ಯನವರ ಹೆಸರಿನಲ್ಲಿ ಮಾತ್ರ ಇತ್ತು ಎಂದರೆ ಸರಿಯಲ್ಲ. 1975 ನೇ ಇಸವಿಯಲ್ಲಿ ಕೈ ಬರಹದ ಪಹಣಿಯಲ್ಲಿ ಅರ್ಜಿಯ ಸ್ವತ್ತಿನ ಖಾತೆ ಪುಟ್ಟಸ್ವಾಮಿಗೌಡ ಮತ್ತು ತಮ್ಮಯ್ಯನವರ ಹೆಸರಿನಲ್ಲಿ ಮಾತ್ರ ಇತ್ತು ಎಂದರೆ ಸರಿ. ಪುಟ್ಟಸ್ವಾಮಿಗೌಡ ಮತ್ತು ತಮ್ಮಯ್ಯನವರು ಸೇರಿಕೊಂಡು ಸರೋಜಮ್ಮನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ 1 ಎಕರೆ ಮಾತ್ರ ಮಾರಾಟ ಮಾಡಿರುತ್ತಾರೆ ಎನ್ನುವರು. ಸದರಿ ಕ್ರಯಪತ್ರವನ್ನು ನೋಡಿರುತ್ತೇನೆ. ಅದರಲ್ಲಿ 1 ಎಕರೆ 22 ಗುಂಟೆಯನ್ನು ಬರೆದಿರುತ್ತದೆ ಎಂದರೆ ಸಾಕ್ಷಿ ಬರೆದಿರುತ್ತಾರೆ ಆದರೆ ಅದು ಸುಳ್ಳು ಎನ್ನುವರು. ಸದರಿ ಕ್ರಯಪತ್ರನ್ನು ನಾನು ಪ್ರಶ್ನೆ ಮಾಡಿರುತ್ತೇನೆ. ಅದನ್ನು ಉಪವಿಭಾಗಾಧಿಕಾರಿಯವರ ಮುಂದೆ ಪ್ರಶ್ನೆ ಮಾಡಿರುತ್ತೇನೆ.

ದಾವಾ ಸ್ವತ್ತಿನ ಸ್ವಾಧೀನವನ್ನು ಸರೋಜಮ್ಮನವರು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವೇ ಸ್ವಾಧೀನ ಹೊಂದಿರುತ್ತೇವೆ ಎನ್ನುವರು. ನಾನು ಪೋಡಿ ಮಾಡಲು ಅರ್ಜಿ ನೀಡಿದಾಗ ಭೂ ಮಾಪಕರು ಬಂದು ಸ್ಥಳ ಪರಿಶೀಲಿಸಿರುತ್ತಾರೆ ಎಂದರೆ ಸರಿ.

ಆ ಸಂದರ್ಭದಲ್ಲಿ ಭೂ ಮಾಪಕರು ನಾನು ಸ್ವಾಧೀನ ಹೊಂದಿರುವುದಿಲ್ಲ ಎಂದು ಬರೆದಿರುತ್ತಾರೆ, ಸಾಕ್ಷಿ ಮುಂದುವರಿದು ತೀರ್ಪು ರುಣಿಗಾರರು ಬರೆಸಿರುತ್ತಾರೆ ಎನ್ನುವರು. ಸದರಿ ವರದಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸರೋಜಮ್ಮನವರು ಸ್ವಾಧೀನ ಹೊಂದಿದ

ನಕಾಶೆ ತಯಾರು ಮಾಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಭೂಮಾಪಕರು ವರದಿ ಮಾಡಿದ ಸಂದರ್ಭದಲ್ಲಿಯೇ ನಕಾಶೆಯನ್ನು ತಯಾರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಯವರ ಮುಂದೆ ನಾನು ಸಲ್ಲಿಸಿದ ಮೇಲ್ಮನವಿಯಲ್ಲಿ ಸರೋಜಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ನಾನು ತಹಶೀಲ್ದಾರ್ ರವರನ್ನು ಮಾತ್ರ ಪಕ್ಷಗಾರರನ್ನಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

ಓಎಸ್ 12/1992 ರಲ್ಲಿ ಆದ ತಿರ್ಪೀನ ಪ್ರಕಾರ ನಾನು ನಿಗದಿತ ಸಮಯದೊಳಗೆ ಅಮಲ್ದಾರಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿನ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರೀಟ್ ಅರ್ಜಿ ಸಲ್ಲಿಸಿದ ಸಮಯದಲ್ಲಿ ಓಎಸ್ 32/2017 ರಂತೆ ದಾವೆ ಮಾನ್ಯ ಹಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇತ್ತು ಎಂದರೆ ಸರಿ. ಅರ್ಜಿ ಸ್ವತ್ತಿನಲ್ಲಿ ಶೆಡ್ ಇರುತ್ತದೆ ಎಂದರೆ ಸಾಕ್ಷಿ ಸ್ವಲ್ಪ ಭಾಗದಲ್ಲಿ ಮಾತ್ರ ಶೆಡ್ ಇದೆ ಎನ್ನುವರು. ಆ ಶೆಡ್ ಪೂರ್ತಿ 22 ಗುಂಟೆಯಲ್ಲಿರುತ್ತದೆ ಎಂದರೆ ಸರಿಯಲ್ಲ. ಈ ಅರ್ಜಿಯ ಸ್ವತ್ತನ್ನು 2 ನೇ ತೀರ್ಪುರುಣೆಗಾರರು ಖರೀದಿ ಮಾಡಿದ ದಿನದಿಂದ ಅವರೇ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದ ಕಾರಣ ನಾನು 2 ನೇ ತೀರ್ಪುರುಣೆಗಾರರ ಹೆಸರಿನಲ್ಲಿದ್ದ ಕ್ರಯಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ ಮತ್ತು ಅವರ ಸ್ವಾಧೀನ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1 ಎಕರೆ 22 ಗುಂಟೆಗೆ ಒಂದೇ ಚೆಕ್ಕುಬಂಧಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿ ಕಂಡುಬರುವ ಜಮೀನು 1 ಎಕರೆ 22 ಗುಂಟೆ ಇರುತ್ತದೆ ಎಂದರೆ ಸಾಕ್ಷಿ ಬರೀ 22 ಗುಂಟೆ ಮಾತ್ರ ಕಂಡುಬರುತ್ತಿದೆ ಎನ್ನುವರು. ಸದರಿ ಭಾವಚಿತ್ರವನ್ನು ನಿಡಿ.1 ಎಂದು ಗುರುತಿಸಲಾಯಿತು. ಅದರಲ್ಲಿ ಶೆಡ್ ಮತ್ತು ಧನಗಳು ಕಂಡುಬರುತ್ತಿದೆ ಎಂದರೆ ಸರಿಯಲ್ಲ. ನಿಡಿ.1 ರಲ್ಲಿ ಜಮೀನು ಎರಡು ಭಾಗವಾಗಿರುವ ಬಗ್ಗೆ ಕಂಡುಬರುತ್ತಿಲ್ಲ ಎಂದರೆ ಸರಿ. ನಾನು ಸ್ವಾಧೀನ ಹೊಂದದೆ ಇದ್ದರೂ ಸಹ

2 ನೇ ತೀರ್ಪುರುಣಿಗಾರನ್ನು ಸ್ವತ್ತಿನಿಂದ ಹೊರಹಾಕುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಈ ಸುಳ್ಳು ಅರ್ಜಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.